## ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 158 ಟಿಎನ್‌ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:24-12-2020.

## ಆದೇಶ

1) ಭಾರತ ಸರ್ಕಾರದ ಗೃಹ ಮಂತ್ರಾಲಯವು ಆದೇಶ ಸಂಖ್ಯೆ:40-3/2020-ಡಿಎಂ-I(ಎ) ದಿನಾಂಕ:25.11.2020ರಲ್ಲಿ ಕೋವಿಡ್-19ರ ನಿಗಾವಣೆ, ನಿಯಂತ್ರಣ ಮತ್ತು ಜಾಗ್ರತೆಗೆ ಸಂಬಂಧಿಸಿದಂತೆ ಹೊರಡಿಸಲಾದ ಮಾರ್ಗಸೂಚಿಗಳನ್ವಯ ಸರ್ಕಾರವು ಆದೇಶ ಸಂಖ್ಯೆ: ಕಂಇ 158 ಟಿಎನ್‌ಆರ್ 2020, ದಿನಾಂಕ:27.11.2020ರಲ್ಲಿ ಯಥಾವತ್ತಾಗಿ ದಿನಾಂಕ:31.12.2020ರವರೆಗೆ ಜಾರಿಗೊಳಿಸಿದೆ. ಇದಲ್ಲದೇ, ಆದೇಶ ಸಂಖ್ಯೆ: ಕಂಇ 465 ಟಿಎನ್‌ಆರ್ 2020, ದಿನಾಂಕ:17.12.2020ರಲ್ಲಿ ರಾಜ್ಯದಲ್ಲಿ ಕೋವಿಡ್-19 ಸೋಂಕು ಹರಡುವಿಕೆಯನ್ನು ನಿಯಂತ್ರಿಸಲು ಮತ್ತು ಪರಿಸರ ಮಾಲಿನ್ಯ ತಡೆಗಟ್ಟಲು ಹಾಗೂ ಬಹು-ಅಸ್ವಸ್ಥತೆ ಹೊಂದಿರುವ ವ್ಯಕ್ತಿಗಳ ಹಿತದೃಷ್ಟಿಯಿಂದ ಕ್ರಿಸ್‌ಮಸ್ ಹಬ್ಬ ಮತ್ತು ಹೊಸ ವರ್ಷ ಆಚರಣೆಯನ್ನು ಯಾವುದೇ ಕೂಟಗಳ ಆಯೋಜನೆ ಇಲ್ಲದೇ, ಸರಳವಾಗಿ ಭಕ್ತಿಪೂರಕವಾಗಿ ಮತ್ತು ಅರ್ಥಗರ್ಭಿತವಾಗಿ ಆಚರಿಸಲು ಹಾಗೂ ಹಸಿರು ಪಟಾಕಿಗಳನ್ನು ಮಾತ್ರ ಹಚ್ಚಲು ಆದೇಶ ಹೊರಡಿಸಲಾಗಿದೆ.

2) ಸರ್ಕಾರದಿಂದ ಹೊರಡಿಸಲಾದ ಕಂಇ 158 ಟಿಎನ್‌ಆರ್ 2020, ದಿನಾಂಕ:27.11.2020ರ ಆದೇಶವು ದಿನಾಂಕ:31.12.2020ರವರೆಗೆ ಜಾರಿಯಲ್ಲಿದ್ದು ಮತ್ತು ಆದೇಶ ಸಂಖ್ಯೆ: ಕಂಇ 465 ಟಿಎನ್‌ಆರ್ 2020, ದಿನಾಂಕ:17.12.2020ರಂದು ಹೊರಡಿಸಲಾಗಿರುವ ಆದೇಶವು 2ನೇ ಜನವರಿ 2021ರವರೆಗೆ ಜಾರಿಯಲ್ಲಿರುತ್ತದೆ.

3) ಬ್ರಿಟನ್ ಹಾಗೂ ಇತರೆ ದೇಶಗಳಲ್ಲಿ ಪತ್ತೆಯಾದ ರೂಪಾಂತರಗೊಂಡಿದ ಕೋವಿಡ್ ವೈರಾಣುವಿನ ಹರಡುವಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ತಜ್ಞರ ಸಲಹೆಯ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ: ಕಂಇ 158 ಟಿಎನ್‌ಆರ್ 2020, ದಿನಾಂಕ:23.12.2020ರಲ್ಲಿ ರಾತ್ರಿ ಕರ್ಫ್ಯೂವನ್ನು ಜಾರಿಗೆ ತರಲಾಗಿತ್ತು.

4) ಸರ್ಕಾರದ ಈ ತೀರ್ಮಾನದ ಕುರಿತಾಗಿ ಸಾರ್ವಜನಿಕ ವಲಯದಲ್ಲಿ ರಾತ್ರಿ ಕರ್ಫ್ಯೂವಿನ ಅಗತ್ಯವಿಲ್ಲವೆಂಬಂತಹ ಅಭಿಪ್ರಾಯಗಳು ವ್ಯಕ್ತವಾದ ಹಿನ್ನಲೆಯಲ್ಲಿ ಮರುಪರಿಶೀಲಿಸಿ ಮತ್ತು ಮೇಲಿನ ಎರಡು ಆದೇಶಗಳು ಜಾರಿಯಲ್ಲಿರುವ ಹಿನ್ನಲೆಯಲ್ಲಿ ದಿನಾಂಕ:23.12.2020ರಂದು ರಾತ್ರಿ ಕರ್ಫ್ಯೂ ಜಾರಿಮಾಡಿ ಹೊರಡಿಸಲಾದ ಆದೇಶ ಸಂಖ್ಯೆ: ಕಂಇ 158 ಟಿಎನ್‌ಆರ್ 2020, ದಿನಾಂಕ:23-12-2020ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

2...

5) ಸಾರ್ವಜನಿಕರು ಸ್ವಯಂ ನಿರ್ಭಂದ ವಿಧಿಸಿಕೊಂಡು, ಮಾಸ್ಕ ಧರಿಸಿ, ಸಾಮಾಜಿಕ ಅಂತರ ಕಾಪಾಡಿಕೊಂಡು ಅನಗತ್ಯವಾಗಿ ಸಂಚರಿಸದಂತೆ ಹಾಗೂ ಸರ್ಕಾರ ವಿಧಿಸಿದ ಕೋವಿಡ್ ನಿಯಂತ್ರಣ ಆದೇಶ / ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಮೂಲಕ ಈ ವೈರಾಣುವಿನ ಹರಡುವಿಕೆಯನ್ನು ನಿಯಂತ್ರಿಸಲು ಸಹಕರಿಸತಕ್ಕದ್ದು.

24/12/20

**(ಟಿ.ಎಂ. ವಿಜಯ್ ಭಾಸ್ಕರ್)**
ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ
ಪ್ರಾಧಿಕಾರದ ಕಾರ್ಯಕಾರಿ ಸಮಿತಿ ಅಧ್ಯಕ್ಷರು

**ಇವರಿಗೆ:**
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.